

> ಆ ಭಟ್ಟರಿಗೆ ಬುದ್ಧಿ ಇಲ್ಲ. ಅವರೇ ಬರಕೊಂಡಿದ್ದಾರಲ್ಲ... ತಲೆ ಕೆಟ್ಟ ಭಟ್ಟ ಎಬಡ ತಬಡ... ಅಂತ. ಅದೆಲ್ಲ ಈಗ ನಿಜ ಅನ್ನಿಸ್ತಿದೆ. 'ಪಂಚತಂತ್ರ' ಸಿನಿಮಾ ರಿಲೀಸ್ ಆಗೋ ಸಮಯಕ್ಕೆ ಎಲೆಕ್ಷನ್ ಅಂತಿದ್ದಾರೆ. ನಿರ್ಮಾಪಕರ ಬಗ್ಗೆ ಕಾಳಜಿ ಬೇಡ್ವೆ? ಗಾಳಿಪಟ ಆದ್ರೂ ಹಾರಿಸಲಿ, ರೈಲಾದರೂ ಬಿಡಲಿ. ಯಾರು ಬೇಕಾದ್ರೂ ಪ್ರಚಾರಕ್ಕೆ ಹೋಗಲಿ, ನಾನಂತೂ ಹೋಗಲ್ಲ. ಐ ಆ್ಯಮ್ ಸಾರಿ... ನಂನಮ್ಮ ಬಿರಿಯಾನಿ ನಾವೇ ಮಾಡ್ಕೋಬೇಕು.
>
> **–ಸೂರಿ**, ನಿರ್ದೇಶಕ

◆ **ಒಗಟಿನ ರೀತಿ ಮಾತಾಡ್ತೀರಿ... ಒಟ್ಟಿನಲ್ಲಿ ನೀವು ಒಂದು ರೀತಿ ರೆಬೆಲ್ ಸ್ಟಾರ್.**

ರೆಬೆಲ್ ಸ್ಟಾರ್ ಅಂತಾದ್ರೂ ಅಂದ್ಕೊಳ್ಳಿ, ಕಾಮಿಡಿ ಕಿಲಾಡಿ ಅಂತ ಬೇಕಾದ್ರೂ ಬರ್ಕೊಳ್ಳಿ.

◆ **ನಿಮ್ಮ ಚಿಹ್ನೆ ಏನು? ನಿಮ್ಮ ಪರವಾಗಿ ಪ್ರಚಾರಕ್ಕೆ ಯಾರೆಲ್ಲ ಬರ್ತಾರೆ?**

ಗುರುತು ಏನಿರಬಹುದು ಗೆಸ್ ಮಾಡಿ. ದಾಸವಾಳ ಅಂತೂ ಖಂಡಿತಾ ಅಲ್ಲ. ಮೊಲದ ಮರಿಯೂ ಅಲ್ಲ. ಗಾಳಿಪಟ ಕಣ್ರೀ...

(ಭಟ್ಟರು ಬ್ಯಾಗ್ರೌಂಡ್ ಮ್ಯೂಸಿಕ್ ಸಮೇತವಾಗಿ ಸಣ್ಣಗೆ ಗುನುಗಿಕೊಳ್ಳತೊಡಗಿದರು... 'ಆಕಾಶ ಇಷ್ಟೇ ಯಾಕಿದೆಯೋ, – ತನ್ನೈ ನನನ್ನೈ..– ಈ ಭೂಮಿ ಕಷ್ಟ ಆಗಿದೆಯೋ, –ತನ್ನೈ ನನನ್ನೈ..– ಇಲ್ಲೇನೋ ಸರಿಯಿಲ್ಲ ಇನ್ನೇನೋ ಬೇಕಲ್ಲ, ನಕ್ಷತ್ರ ಲೋಕಕ್ಕೆ ಲಗ್ಗೆ ಇಟ್ಟು ಹಾರೋ ನಾವೆ...' ಎದುರಿಗಿದ್ದ ನಮ್ಮನ್ನು ನೋಡಿ ತುಟಿ ಕಚ್ಚಿಕೊಳ್ಳುತ್ತ ಮತ್ತೆ ಮಾತಿಗೆ ಹೊರಳಿದರು.)

ಇನ್ನು ಪ್ರಚಾರಕ್ಕೆ ನನ್ನ ಗೆಳೆಯರೆಲ್ಲ ಬರ್ತಾರೆ. ವಿಜಿ ಮತ್ತೆ ಗಣಿ ಅವರದು ಲೀಡ್ ರೋಲು. ಚುನಾವಣೆ ಮುಗಿಯೋವರೆಗೆ ಬೆಳಗಿನ ತಿಂಡಿಯಿಂದ ತೂಕಡಿಸುವಾಗಿನ ತೀರ್ಥದವರೆಗೆ ನನ್ನ ಜೊತೆಯೇ ಇರ್ತೀವಿ ಅಂತ ಪ್ರಾಮಿಸ್ ಮಾಡಿದ್ದಾರೆ. ಇನ್ನು ನಮ್ಮ ರಂಗಾಯಣ, ಸೂರಿ ಅವರದು ಪೋಷಕ ಪಾತ್ರಗಳು. ಗೆಸ್ಟ್ ಅಪಿಯರೆನ್ಸ್ ಆಗಿ ಬರ್ತೀವಿ ಅಂತ ಸುದೀಪು ಫೋನ್ ಮಾಡಿದ್ರು. ಅಪ್ಪು ಅವರ ವಿಷಸ್ ಕೂಡ ನಂಗಿದೆ. ನೋಡ್ತಾ ಇರಿ... ಧಾರವಾಡವನ್ನ ಗಾಂಧೀನಗರ ಮಾಡದೇ ಹೋದ್ರೆ ನನ್ನ ಹೆಸರು... ಥೋ... ಬ್ಯಾಡ ಬಿಡ್ರೀ... ರಾಜಕಾರಣಕ್ಕೆ ಬಂದೆ ಅಂತ ರಾಜಕಾರಣಿಗಳ ಭಾಷೆಯಲ್ಲೇ ಮಾತಾಡೋದು ತಪ್ಪು. ಇಷ್ಟನ್ನ ಹೇಳಲಿಕ್ಕೆ ಇಷ್ಟ ಪಡ್ತೀನಿ, ಏಪ್ರಿಲ್ 1ನೇ ತಾರೀಖು ನಾಮಪತ್ರ ಸಲ್ಲಿಸ್ತೀನಿ, ಆಗ ನನ್ನ ಜೊತೇಲಿ ಯಾರ್‍ಯಾರು ಇರ್ತಾರೆ ಅನ್ನೋದು ನಿಮಗೇ ಗೊತ್ತಾಗುತ್ತೆ.

◆ **ಜಯಂತ ಕಾಯ್ಕಿಣಿ ಅವರೂ ಪ್ರಚಾರಕ್ಕೆ ಬರ್ತಾರಾ?**

ನಿಮಗೊಂದು ವಿಷಯ ಹೇಳಲಾ... ರಾಜಕೀಯ ಪ್ರಜ್ಞೆ ಕುರಿತು ನನಗೆ ಒಂದು ಬೆಳಗ್ಗೆ ಜ್ಞಾನೋದಯ ಆಯ್ತಲ್ಲ... ಆಗ ನಾನು ಮೊದಲು ಫೋನ್ ಮಾಡಿದ್ದೇ ಜಯಂತಣ್ಣನಿಗೆ. ನನ್ನ ಮಾತು ಕೇಳಿ ಅವರಿಗೆ ಥ್ರಿಲ್ ಆಗೋಯ್ತು. ನನ್ನ ಫುಲ್ ಆಶೀರ್ವಾದ ನಿಮ್ಮ ಮೇಲಿದೆ, ವಿಜಯೀಭವ ಎಂದು ಆಶೀರ್ವದಿಸಿದರು. 'ನಾವು ಮನುಷ್ಯನಾಗಿ ಹುಟ್ಟಿಲ್ಲ; ಮನುಷ್ಯರಾಗಲು ಹುಟ್ಟಿದ್ದೇವೆ' ಅಂತ ಯಶವಂತ ಚಿತ್ತಾಲರು ಹೇಳಿದ್ದಾರೆ. ಅದನ್ನು ಸ್ವಲ್ಪ ಬದಲಾಯಿಸಿಕೊಂಡು 'ನಾವು ರಾಜಕಾರಣಿಗಳಾಗಿ ಹುಟ್ಟಿಲ್ಲ; ರಾಜಕಾರಣಿಗಳಾಗಲು ಹುಟ್ಟಿದ್ದೇವೆ' ಎಂದು ಮಾಡಿಕೊಳ್ಳೋಣ ಅಂತ ಐಡಿಯಾ ಕೂಡ ಕೊಟ್ಟಿದ್ದಾರೆ.

◆ **ಪ್ರಚಾರಕ್ಕೆ ಸಾಂಗ್ಸ್ ಏನಾದ್ರೂ ಬರೀತಾರಾ ಸಾರ್?**

ನನ್ನ ಮುಖಮೂತಿ ಒಂದು ಗೊತ್ತಿಲ್ಲದ ಸಮಯದಲ್ಲಿ 'ಮುಂಗಾರು ಮಳೆ'ಗೆ ಹಾಡು ಬರೆದುಕೊಟ್ಟೋರು ಈಗ ಬರೆದುಕೊಡಲ್ಲ ಅಂತೀರಾ... ನಾನು 'ನೋ ಪ್ರೆಸೆಂಟ್ಸ್ ಪ್ಲೀಸ್' ಅಂದರೂ ಅವರು ಸುಮ್ನಿರ್ತಾರಾ...

◆ **ಜಯಂತರ ವಿಷಯ ಬಿಡಿ ಸರ್... ಗಾಳಿಪಟದ ಬಗ್ಗೆ ಹೇಳಿ... ಗಾಳಿಪಟದ ಬಗ್ಗೆ ನಿಮಗೆ ಏಕೆ ಮೋಹ?**

ನೋಡಿ, ಆಕಾಶ ಅನ್ನೋದಿದೆಯಲ್ಲ... ಅದು ನನಗೆ ಸಮುದ್ರದ ರೀತಿ ಕಾಣಿಸುತ್ತೆ. ತಲೆಕೆಳಗಾಗಿ ನಿಂತ ಸಮುದ್ರ ಅದು. ಗಾಳಿಪಟ ಅನ್ನೋದು ಗಾಳಿ ಇದ್ದಂತೆ. ಸಮುದ್ರಕ್ಕೆ ಗಾಳ ಹಾಕೋದು ನನಗೆ ತುಂಬಾ ಇಷ್ಟ. ಯಾರಿಗೆ ಗೊತ್ತು... ಗಾಳಕ್ಕೆ ಏನೇನು ಬೀಳುತ್ತೋ...

◆ **ಸದ್ಯಕ್ಕೆ ಜನರ ಓಟಿಗೆ ಗಾಳ ಹಾಕಿದ್ದೀರಿ...**

ಮತ್ತೆ ತಪ್ಪು ಮಾತು... ನಾನು ಜನರ ಹೃದಯಕ್ಕೆ ಗಾಳ ಹಾಕಿದ್ದೇನೆ...

◆ **ಒಂದು ವೇಳೆ ಚುನಾವಣೇಲಿ ಗೆದ್ರೆ, ಆಮೇಲೂ ಸಿನಿಮಾ ಡೈರೆಕ್ಷನ್ ಮಾಡ್ತೀರಾ?**

ಈ ದೇಶಾನೇ ಡೈರೆಕ್ಷನ್ ಮಾಡೋ ಅವಕಾಶ ನನಗೆ ಸಿಕ್ತು ಅಂದ್ಕೊಳ್ಳಿ. ಆಗಲೂ ನಾನು ಸಿನಿಮಾ ಡೈರೆಕ್ಷನ್ ಬಿಡೊಲ್ಲ. ಆ ಮಜಾನೇ ಬೇರೆ ಕಣ್ರೀ... ಇವತ್ತು ನಾನು ಎಲೆಕ್ಷನ್‌ಗೆ ನಿಲ್ಲೋ ಕಾನ್ಫಿಡೆನ್ಸ್ ಬಂದಿರೋದು ಯಾವುದರಿಂದ, ಸಿನಿಮಾದಿಂದ... ಹತ್ತಿದ ಏಣಿಯನ್ನು ಒದೆಯೋ ಮಗ ನಾನಲ್ಲ ಕಣ್ರಿ...

ತಮಾಷೆಗೆ ಹೇಳ್ತೀನಿ, ಬರೀಬಾರ್ದು ಮತ್ತೆ... ನಾನು ಸಿನಿಮಾ ಮಾಡಲ್ಲ ಅಂದ್ರೆ ಈ ಕನಕಪುರ, ಜಯಣ್ಣ ಭೋಗಣ್ಣ, ಕುಮಾರು, ಮತ್ತೆ ಆ ಬ್ರದರ್ರು... ಇವರೆಲ್ಲ ಸುಮ್ನಿರ್ತಾರೆ ಅಂದ್ಕೊಂಡ್ರಾ? ಹೊಸ ಸಿನಿಮಾಕ್ಕೆ ಅಡ್ವಾನ್ಸ್ ರೂಪದಲ್ಲಿ ಈಗ ಚುನಾವಣೆ ಖರ್ಚಿಗೆ ಫಂಡ್ ಕೊಟ್ಟಿರೋದೆ ಅವ್ರು. ಹೀಗಿರುವಾಗ ನಾನು ಸಿನಿಮಾ ಬಿಡ್ತೀನಿ ಅಂದ್ರೂ ಸಿನಿಮಾ ನನ್ನನ್ನ ಬಿಡುತ್ತಾ...

ಹಾಂ, ನಾಮಪತ್ರಾನೂ 'ಪಂಚರಂಗಿ' ಚಿತ್ರದ 'ಗಳು.. ಗಳು..' ಸ್ಟೈಲಿನಲ್ಲಿ ಬರೀಬೇಕು ಅಂತ ಪ್ಲ್ಯಾನ್ ಮಾಡಿದ್ದೀನಿ. ಹೆಚ್ಚು ಟೈಮಿಲ್ಲ, ಸಂದರ್ಶನ ಇಲ್ಲಿಗೆ ಮುಗಿಸೋಣ. ಅಂದಹಾಗೆ, ನಾನು ಬರೆದಿದ್ದ 'ಚುನಾವಣಾ ಗೀತೆ' ಕೇಳಿದ್ದೀರೇನ್ರಿ... ಕೇಳಿಸ್ತೀನಿ, ಕೇಳ್ಕೊಳ್ಳಿ...

(ಭಟ್ಟರು ತಮ್ಮ ಮೊಬೈಲ್‌ನಿಂದ ಹಾಡನ್ನು ಕೇಳಿಸತೊಡಗಿದರು.)

ಭ್ರಷ್ಟ ನಾಯಕರ ಹುಟ್ಟಿಗೆ ಕಾರಣ
ಮತ ನೀಡದ ಪ್ರಜೆಯು...
ಉತ್ತಮ ರಾಷ್ಟ್ರಕೆ ಕೆಚ್ಚಿನ ಪ್ರಜೆಯೇ
ಎಂದೆಂದಿಗು ಪ್ರಭುವು...

ಬನ್ನಿ ಮನಸು ಮಾಡೋಣ
ಹೊಸದೇ ಕನಸು ಕಾಣೋಣ
ಇದು ಕರ್ತವ್ಯ ಇದು ಕರ್ತವ್ಯ
ರಾಷ್ಟ್ರ ರಚಿಸೋಣ....

ಮಾಡಿ ಮಾಡಿ ಮಾಡಿ ಮತದಾನ
ಇರಲಿ ದೇಶದ ಮೇಲೆ ಅಭಿಮಾನ
ನಮ್ಮ ವೋಟು ನಮಗೇ ಬಹುಮಾನ
ತಿರುಗಿ ನೋಡಲಿ ನಮ್ಮನು ಶತಮಾನ...

77ನೇ ಪುಟ ನೋಡಿ...

